ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಕಡತ ಸಂಖ್ಯೆ:ಸಿಬ್ಬಂದಿ-1-89/2021-22

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆ.ಜಿ. ರಸ್ತೆ, ಬೆಂಗಳೂರು.
ದಿನಾಂಕ:01-01-2022.

ವಿಷಯ: ಕೋವಿಡ್-19 ವೈರಸ್ ಹರಡುವಿಕೆಯಿಂದ ಉಂಟಾದ ರಾಜಸ್ವ ನಷ್ಟವನ್ನು ಸಂಗ್ರಹಿಸಲು ಸ್ಥಿರಾಸ್ತಿಗಳ ಮಾರ್ಗಸೂಚಿ ದರಗಳನ್ನು ಕಡಿಮೆಗೊಳಿಸಿ ಜಾರಿಗೆ ತರುವ ಕುರಿತು.

ಉಲ್ಲೇಖ:
1. ದಿನಾಂಕ:08-12-2021 ರಂದು ಸನ್ಮಾನ್ಯ ಮುಖ್ಯಮಂತ್ರಿರವರ ಅಧ್ಯಕ್ಷತೆಯಲ್ಲಿ ಹಾಗೂ ಇತರೆ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ನಡೆದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿನ ಸೂಚನೆ.
2. ಇದೇ ಸಮ ಸಂಖ್ಯೆಯ ಕಡತದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಕಂದಾಯ ಮಂತ್ರಿಗಳು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಮತ್ತು ಸರ್ಕಾರದ ಪ್ರದಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರಿಂದ ಅನುಮೋದಿತ ಟಿಪ್ಪಣಿ.
3. ಕೇಂದ್ರ ಮೌಲ್ಯ ಮಾಪನ ಸಮಿತಿ ಸಭೆಯ ನಡವಳಿ ಸಂಖ್ಯೆ:ನೋ.ಮು./ಸಿವಿಸಿ/99/2021-22 ದಿನಾಂಕ:01-01-2022.

********

**ಪ್ರಸ್ತಾವನೆ:**

ಉಲ್ಲೇಖ (1) ರನ್ವಯ ದಿನಾಂಕ:08-12-2021 ರಂದು ನಡೆದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಜಸ್ವ ಸಂಗ್ರಹಣೆಯ ಮಾಹಿತಿಯನ್ನು ಪರಿಶೀಲಿಸಲಾಯಿತು. ರಾಜ್ಯಾದ್ಯಂತ 2019-20ನೇ ಸಾಲಿನಿಂದ ಸಂಗ್ರಹಿಸಲಾದ ರಾಜಸ್ವದ ಮಾಹಿತಿಯನ್ನು ಅವಲೋಕಿಸಿದಾಗ ಕೋವಿಡ್ ಇದ್ದುದರಿಂದ ರೂ.2,101 ಕೋಟಿಗಳಷ್ಟು ರಾಜಸ್ವ ಸಂಗ್ರಹಣೆಯಲ್ಲಿ ಕೊರತೆ ಉಂಟಾಗಿರುವುದು ಕಂಡುಬಂದಿರುತ್ತದೆ.

ರಾಜಸ್ವ ಹೆಚ್ಚಳಕ್ಕಾಗಿ ಹೊರ ರಾಜ್ಯಗಳಲ್ಲಿ ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸಲಾಯಿತು. ದೆಹಲಿ ರಾಜ್ಯದಲ್ಲಿ ನಿರ್ದಿಷ್ಟ ಅವಧಿಗೆ ಶೇ.20 ರಷ್ಟು ಮಾರ್ಗಸೂಚಿ ದರಗಳನ್ನು ಕಡಿಮೆಗೊಳಿಸಿ ಆದೇಶವನ್ನು ಜಾರಿಗೆ ತರಲಾಗಿದ್ದು, ಇದರಿಂದ ಹೆಚ್ಚಿನ ರಾಜಸ್ವ ಸಂಗ್ರಹವಾಗಿರುವುದನ್ನು ಗಮನಿಸಿ, ರಾಜ್ಯಾದ್ಯಂತ ಪ್ರಸ್ತುತ ಚಾಲ್ತಿಯಲ್ಲಿರುವ ಸ್ಥಿರಾಸ್ತಿಗಳ ಮಾರ್ಗಸೂಚಿ ದರಗಳನ್ನು ಶೇ.10 ರಷ್ಟು ಕಡಿತಗೊಳಿಸುವುದರ ಬಗ್ಗೆ ಚರ್ಚಿಸಿ, ಸದರಿ ದರಗಳನ್ನು ಶೇ.10 ರಷ್ಟು ಕಡಿತಗೊಳಿಸುವ ಬಗ್ಗೆ ತೀರ್ಮಾನಿಸಲು ಕಡತವನ್ನು ಪ್ರಸ್ತಾವನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿರುತ್ತಾರೆ.

ಸದರಿ ಸೂಚನೆಯ ಮೇರೆಗೆ ಇಲಾಖೆಯಿಂದ ಈ ಕೆಳಕಂಡ ಪ್ರಸ್ತಾವನೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ರವರಿಗೆ ಸಲ್ಲಿಸಲಾಯಿತು.

- ರಾಜ್ಯಾದ್ಯಂತ ಸ್ಥಿರಾಸ್ತಿಗಳ ಮಾರ್ಗಸೂಚಿ ದರಗಳನ್ನು ಪರಿಷ್ಕರಿಸಿ ದಿನಾಂಕ: 01-01-2019 ರಿಂದ ಜಾರಿಗೆ ತರಲಾಗಿದ್ದು, ದಸ್ತಾವೇಜುಗಳ ನೋಂದಣಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರದ ಶೇ.10 ರಷ್ಟು ಕಡಿಮೆ ದರಗಳನ್ನು ದಿನಾಂಕ: 01-01-2022 ರಿಂದ ದಿನಾಂಕ: 31-03-2022 ರವರೆಗಿನ ಅವಧಿಗೆ ಮಾರ್ಗಸೂಚಿ ದರಗಳೆಂದು ಪರಿಗಣಿಸಬಹುದಾಗಿದೆ.
- ಕರ್ನಾಟಕ ಮುದ್ರಾಂಕ ಕಾಯ್ದೆ, 1957 ರ ಕಲಂ 45-B ರಂತೆ ಹಾಗೂ Karnataka Stamp (Constitution of Central Valuation Committee for Estimation, Publication and Revision of Market Value Guidelines of Properties) Rules, 2003 ರ ನಿಯಮ 9 ರನ್ವಯ ಮಾರ್ಗಸೂಚಿ ದರಗಳನ್ನು ಪರಿಷ್ಕರಿಸಲು ಕೇಂದ್ರ ಮೌಲ್ಯ ಮಾಪನ ಸಮಿತಿಗೆ ಅಧಿಕಾರವಿರುತ್ತದೆ. ಅಲ್ಲದೇ ಸದರಿ ನಿಯಮಗಳ ನಿಯಮ 9 (3) ರ ಉಪಬಂಧ ಈ ಕೆಳಕಂಡಂತೆ ಇರುತ್ತದೆ.

  "The Committee or Chairman may, in his discretion, as the case may be order for special revision of the market value guidelines in any specified area of a sub-district, district for rectification of any anomaly in the estimation of market value, and may also order for special revision of market value guidelines of any sub-district or all the sub-districts in the State for any reason to be recorded in the proceedings of the Committee."
- ಕೋವಿಡ್-19 ಸೋಂಕಿನ ಹರಡುವಿಕೆಯಿಂದ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯಗಳು ಕುಸಿತಗೊಂಡಿರುವ ಹಿನ್ನಲೆಯಲ್ಲಿ ಶೇ.10 ರಷ್ಟು ಕಡಿತಗೊಳಿಸಿದ ಮಾರ್ಗಸೂಚಿ ದರಗಳನ್ನು ದಸ್ತಾವೇಜುಗಳ ನೋಂದಣಿಗೆ 3 ತಿಂಗಳ ಅವಧಿಗೆ ಅಳವಡಿಸಿ ರಾಜಸ್ವದ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಬಹುದಾಗಿದ್ದು, CREDAI, ಬೆಂಗಳೂರು ರವರು ಈ ಕಛೇರಿಗೆ ದಿನಾಂಕ:08-12-2021 ರಂದು ನೀಡಿರುವ ಮನವಿಯಲ್ಲಿಯೂ ಸಹ ಸ್ವತ್ತುಗಳ ಮಾರುಕಟ್ಟೆ ಮೌಲ್ಯಗಳು ಕುಸಿತಗೊಂಡಿರುವುದನ್ನು ಉಲ್ಲೇಖಿಸಿರುತ್ತಾರೆ.
- ಸಾಮಾನ್ಯವಾಗಿ ಪ್ರತಿ ವರ್ಷ ಕೇಂದ್ರ ಮೌಲ್ಯ ಮಾಪನ ಸಮಿತಿಯು ಉಪ ಸಮಿತಿಗಳಿಗೆ ಮಾರ್ಗಸೂಚಿ ದರಗಳನ್ನು ಪರಿಷ್ಕರಿಸಲು ನಿರ್ದೇಶಿಸಿ, ನಂತರ ಸದರಿ ಉಪ ಸಮಿತಿಗಳಿಂದ ಸ್ವೀಕರಿಸಿದ ಪರಿಷ್ಕೃತ ಮಾರ್ಗಸೂಚಿ ದರಗಳನ್ನು ಕೇಂದ್ರ ಮೌಲ್ಯ ಮಾಪನ ಸಮಿತಿ ಸಭೆಯಲ್ಲಿ ಮಂಡಿಸಿ ಅಂತಿಮವಾಗಿ ಮಾರ್ಗಸೂಚಿ ದರಗಳನ್ನು ನಿಗದಿಪಡಿಸಿ ಅನುಮೋದನೆ ನೀಡಲಾಗುವುದು. ಈ ಪ್ರಕ್ರಿಯೆಯು ಚಾಲನೆಯಲ್ಲಿದ್ದು, ಪರಿಷ್ಕರಿಸಿದ ದರಗಳಿಗೆ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಪಡೆದು, ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ, ನಂತರ ಪರಿಷ್ಕರಿಸಿದ ದರಗಳನ್ನು ಕೇಂದ್ರ ಮೌಲ್ಯ ಮಾಪನ ಸಮಿತಿಯಿಂದ ಅನುಮೋದನೆ ನೀಡಲು ಸಾಕಷ್ಟು ಕಾಲಾವಕಾಶ ಬೇಕಾಗಿರುತ್ತದೆ.

- ಸ್ಥಿರಾಸ್ತಿಗಳಾದ ಕೃಷಿ ಜಮೀನು, ನಿವೇಶನ ಮತ್ತು ಕಟ್ಟಡಗಳು, ಭೂ ಪರಿವರ್ತಿತ ಜಮೀನುಗಳು, ಅಪಾರ್ಟ್‌ಮೆಂಟ್‌ಗಳು, ಮತ್ತು ಇನ್ನಿತರೆ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳಾದ ಕ್ರಯ, ದಾನ, ಅದಲು-ಬದಲು, ವರ್ಗಾವಣೆ, Settlement, ಸಾಮಾನ್ಯ ಅಧಿಕಾರ ಪತ್ರ, ಲೀಸ್, ಸ್ವಾಧೀನ ಸಹಿತ ಕ್ರಯದ ಕರಾರು, ಜಂಟಿ ಅಭಿವೃದ್ಧಿ ಕರಾರು, ಸ್ವಾಧೀನ ಸಹಿತ ಆಧಾರ ಪತ್ರಗಳು ಮತ್ತು ಇತರೆ ದಸ್ತಾವೇಜುಗಳಿಗೆ ಮಾರ್ಗಸೂಚಿ ಮೌಲ್ಯಗಳ ಆಧಾರದ ಮೇರೆಗೆ ಶುಲ್ಕಗಳನ್ನು ಆಕರಿಸುವುದರಿಂದ, ಶೇ.10 ರಷ್ಟು ಸಡಿಲಗೊಳಿಸಿದ ಮಾರ್ಗಸೂಚಿ ದರಗಳು ಮೇಲಿನ ದಸ್ತಾವೇಜುಗಳ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ದಸ್ತಾವೇಜುಗಳ ನೋಂದಣಿ ಹೆಚ್ಚಾಗಬಹುದಾಗಿದ್ದು, ರಾಜಸ್ವ ಸಂಗ್ರಹಣೆಯು ಸಹ ಹೆಚ್ಚಾಗುವ ಸಂಭವವಿರುತ್ತದೆ.
- ಪ್ರಸ್ತುತ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರಗಳ ಶೇ.10 ರಷ್ಟು ಕಡಿತಗೊಳಿಸಿದ ಅಥವಾ ಸಡಿಲಿಸಿದ (Relaxation) ಮಾರ್ಗಸೂಚಿ ದರಗಳನ್ನು ದಸ್ತಾವೇಜುಗಳ ನೋಂದಣಿಗೆ 3 ತಿಂಗಳ ಅವಧಿಗೆ ಅಳವಡಿಸಿ ರಾಜಸ್ವದ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಬಹುದಾಗಿರುತ್ತದೆ ಎಂದು ಅಭಿಪ್ರಾಯಿಸಿ ಈ ಕೆಳಕಂಡಂತೆ ಅಧಿಸೂಚನೆ ಹೊರಡಿಸಲು ಪ್ರಸ್ತಾಪಿಸಲಾಗಿತ್ತು.

**ಕರಡು ಅಧಿಸೂಚನೆ**

**"ಕರ್ನಾಟಕ ಮುದ್ರಾಂಕ ಕಾಯ್ದೆ, 1957 ರ ಕಲಂ 45-ಬಿ ಮತ್ತು ಕರ್ನಾಟಕ ಮುದ್ರಾಂಕ (ಆಸ್ತಿಯ ಅಂದಾಜು ಸರಾಸರಿ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯ ಪರಿಷ್ಕರಣೆ ಮತ್ತು ಪ್ರಕಟಣೆಗಾಗಿ ಕೇಂದ್ರ ಮೌಲ್ಯ ಮಾಪನ ಸಮಿತಿಯ ರಚನೆ) ಅಧಿನಿಯಮಗಳು 2003 ರ ಕಲಂ 9(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸ್ಥಿರಾಸ್ತಿಗಳ ಮಾರ್ಗಸೂಚಿ ದರಗಳನ್ನು ದಿನಾಂಕ:01-01-2019 ರಿಂದ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಅಧಿಸೂಚನೆ ಸಂಖ್ಯೆ: ನೋ.ಮು/ಸಿವಿಸಿ/485/2017-18, ಬೆಂಗಳೂರು,ದಿನಾಂಕ:05-12-2018 ರನ್ವಯ ಜಾರಿಗೆ ಬಂದಿರುವ ಹಾಗೂ ರಾಜ್ಯದ ಇತರೆ ಜಿಲ್ಲೆಗಳಿಗೆ ವಿವಿಧ ಅಧಿಸೂಚನೆಗಳ ಮೂಲಕ ದಿನಾಂಕ:01-01-2019 ರಿಂದ ಜಾರಿಗೆ ಬಂದಿರುವ ಮಾರ್ಗಸೂಚಿ ದರಗಳನ್ನು ದಿನಾಂಕ:01-01-2022 ರಿಂದ 31-03-2022 ರವರೆಗಿನ ಅವಧಿಗೆ ಪ್ರಸ್ತುತ ಜಾರಿಯಲ್ಲಿರುವ ಮಾರ್ಗಸೂಚಿ ದರಗಳ ಶೇ.10 ರಷ್ಟು ಕಡಿಮೆಗೊಳಿಸಿದ ದರಗಳನ್ನು ದಸ್ತಾವೇಜುಗಳ ನೋಂದಣಿಗೆ ಮಾರ್ಗಸೂಚಿ ದರಗಳೆಂದು ಪರಿಗಣಿಸಿ ಆದೇಶಿಸಿದೆ."**

- ಅಲ್ಲದೇ, ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಕೇಂದ್ರ ಮೌಲ್ಯ ಮಾಪನ ಸಮಿತಿಯ ಅಧ್ಯಕ್ಷರಾಗಿದ್ದು, Karnataka Stamp (Constitution of Central Valuation Committee for Estimation, Publication and Revision of Market Value Guidelines of Properties) Rules, 2003 ರ ನಿಯಮ 9(3)ರಲ್ಲಿನ ಅಧಿಕಾರದನ್ವಯ ಪ್ರಸ್ತುತ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರಗಳಲ್ಲಿ ಶೇ.10 ರಷ್ಟು ಕಡಿಮೆ ದರಗಳನ್ನು ದಿನಾಂಕ:01-01-2022 ರಿಂದ ದಿನಾಂಕ:31-03-2022 ರವರೆಗಿನ ಅವಧಿಗೆ ಮಾರ್ಗಸೂಚಿ ದರಗಳೆಂದು ಪರಿಗಣಿಸಿ ಅಧಿಸೂಚನೆ ಹೊರಡಿಸುವ ಮೂಲಕ ಆದೇಶಿಸಲು ಸರ್ಕಾರದ ಅನುಮತಿ ಕೋರಲಾಯಿತು.

4..

ಮೇಲಿನ ಇಲಾಖೆಯ ಪ್ರಸ್ತಾವನೆಯನ್ನು ಉಲ್ಲೇಖ (2) ರನ್ವಯ ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಕಂದಾಯ ಮಂತ್ರಿಗಳು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರುಗಳು ಅನುಮೋದಿಸಿ **ಪ್ರಸ್ತುತ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರಗಳಲ್ಲಿ ಶೇ.10 ರಷ್ಟು ಕಡಿಮೆ ದರಗಳನ್ನು ದಿನಾಂಕ:01-01-2022 ರಿಂದ ದಿನಾಂಕ:31-03-2022 ರವರೆಗಿನ ಅವಧಿಗೆ ದಸ್ತಾವೇಜುಗಳ ನೋಂದಣಿಗೆ ಮಾರ್ಗಸೂಚಿ ದರಗಳೆಂದು ಪರಿಗಣಿಸಿ ಅಧಿಸೂಚನೆ ಹೊರಡಿಸಲು** ಅನುಮತಿ ನೀಡಿರುತ್ತಾರೆ.

ನಂತರ ಉಲ್ಲೇಖ (3) ರನ್ವಯ ಕೇಂದ್ರ ಮೌಲ್ಯ ಮಾಪನ ಸಮಿತಿ ಸಭೆಯನ್ನು ದಿನಾಂಕ:01-01-2022 ರಂದು ಆಯೋಜಿಸಿ, **ಪ್ರಸ್ತುತ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರಗಳಲ್ಲಿ ಶೇ.10 ರಷ್ಟು ಕಡಿಮೆ ದರಗಳನ್ನು ದಿನಾಂಕ:01-01-2022 ರಿಂದ ದಿನಾಂಕ:31-03-2022 ರವರೆಗಿನ ಅವಧಿಗೆ ದಸ್ತಾವೇಜುಗಳ ನೋಂದಣಿಗೆ ಮಾರ್ಗಸೂಚಿ ದರಗಳೆಂದು ಪರಿಗಣಿಸಿ ಅಧಿಸೂಚನೆ ಹೊರಡಿಸುವ** ಬಗ್ಗೆ ವಿಷಯವನ್ನು ಪ್ರಸ್ತಾಪಿಸಿ ಚರ್ಚಿಸಲಾಯಿತು. ಸಭೆಯಲ್ಲಿ ಕೋವಿಡ್-19 ಸೋಂಕಿನ ಹರಡುವಿಕೆಯಿಂದ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯಗಳು ಕುಸಿತಗೊಂಡಿರುವುದನ್ನು ಮನಗಂಡು ಮೇಲಿನಂತೆ ಅಧಿಸೂಚನೆಯನ್ನು ಹೊರಡಿಸಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

ಆದ್ದರಿಂದ ಈ ಕೆಳಕಂಡಂತೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

## ಅಧಿಸೂಚನೆ

**ಕಡತ ಸಂಖ್ಯೆ:ನೋ.ಮು/ಸಿವಿಸಿ/99/2021-22** **ದಿನಾಂಕ:01-01-2022**

**"ಕರ್ನಾಟಕ ಮುದ್ರಾಂಕ ಕಾಯ್ದೆ, 1957 ರ ಕಲಂ 45-ಬಿ ಮತ್ತು ಕರ್ನಾಟಕ ಮುದ್ರಾಂಕ (ಆಸ್ತಿಯ ಅಂದಾಜು ಸರಾಸರಿ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯ ಪರಿಷ್ಕರಣೆ ಮತ್ತು ಪ್ರಕಟಣೆಗಾಗಿ ಕೇಂದ್ರ ಮೌಲ್ಯ ಮಾಪನ ಸಮಿತಿಯ ರಚನೆ) ಅಧಿನಿಯಮಗಳು, 2003 ರ ಕಲಂ 9(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ:31-12-2021 ರಂದು ಜಾರಿಯಲ್ಲಿರುವ ರಾಜ್ಯದ ಎಲ್ಲಾ ವಿಧದ ಸ್ಥಿರಾಸ್ತಿಗಳ (ಕೃಷಿ ಜಮೀನು, ಕೃಷಿಯೇತರ ಜಮೀನು, ನಿವೇಶನ, ಕಟ್ಟಡ, ಅಪಾರ್ಟ್‌ಮೆಂಟ್ / ಫ್ಲಾಟ್‌ಗಳು ಮತ್ತು ಇತರೆ) ಮಾರ್ಗಸೂಚಿ ದರಗಳಿಗೆ ದಿನಾಂಕ:01-01-2022 ರಿಂದ 31-03-2022 ರವರೆಗಿನ ಅವಧಿಗೆ ಶೇ.10 ರಷ್ಟು ಕಡಿಮೆಗೊಳಿಸಿದ ದರಗಳನ್ನು ದಸ್ತಾವೇಜುಗಳ ನೋಂದಣಿಗೆ ಮಾರ್ಗಸೂಚಿ ದರಗಳೆಂದು ಪರಿಗಣಿಸಿ ಆದೇಶಿಸಿದೆ."**

1.1.22

ಅಧ್ಯಕ್ಷರು,
ಕೇಂದ್ರ ಮೌಲ್ಯ ಮಾಪನ ಸಮಿತಿ, ಹಾಗೂ
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.